# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 630
2. ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 13-12-2024
4. ಉತ್ತರಿಸಬೇಕಾದ ಸಚಿವರು : ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖಾ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಅಡಿಯಲ್ಲಿ ಬರುವ ವಿವಿಧ ವಿಭಾಗಗಳು ಯಾವುವು; ಮತ್ತು ಈ ವಿಭಾಗಗಳ ಅಡಿಯಲ್ಲಿ ಕೈಗೊಂಡಿರುವ ಯೋಜನೆಗಳು ಯಾವುವು; (ವಿಭಾಗವಾರು ಪೂರ್ಣ ಮಾಹಿತಿ ನೀಡುವುದು) | ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಅಡಿಯಲ್ಲಿ ಬರುವ ವಿಭಾಗಗಳು / ಇಲಾಖೆಗಳು ಈ ಕೆಳಕಂಡಂತಿವೆ.<br>1. ಯೋಜನೆ, ಹಣಕಾಸು ಮತ್ತು ಸಂಪನ್ಮೂಲ ವಿಭಾಗ<br>2. ಮಾನವ ಅಭಿವೃದ್ಧಿ ವಿಭಾಗ<br>3. ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ<br>4. ಯೋಜನೆ, ಸಂಯೋಜನೆ ಮತ್ತು ಮಾಹಿತಿ ವಿಭಾಗ<br>5. ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ<br>6. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ<br>ಯೋಜನಾ ಇಲಾಖೆಯಲ್ಲಿ ಪ್ರಮುಖವಾಗಿ ಪ್ರದೇಶಾಭಿವೃದ್ಧಿ ಮಂಡಳಿಯಡಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಕಾರ್ಯ ನಿರ್ವಹಿಸುತ್ತಿವೆ. ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಹಾಗೂ ವಿಶೇಷ ಅಭಿವೃದ್ಧಿ ಯೋಜನೆಗಳು ಜಿಲ್ಲಾಧಿಕಾರಿಗಳು/ಸಹಾಯಕ ಆಯುಕ್ತರು ಹಾಗೂ ವಿವಿಧ ಇಲಾಖೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ.<br><br>**ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಇಲಾಖೆ ಅಡಿಯಲ್ಲಿ** 6 ತಾಂತ್ರಿಕ ವಿಭಾಗಗಳು ಹಾಗೂ ಒಂದು ಆಡಳಿತ ಮತ್ತು ಲೆಕ್ಕ ಶಾಖೆ ಇದೆ.<br>6 ತಾಂತ್ರಿಕ ವಿಭಾಗಗಳು:<br>1.ಕೃಷಿ ಅಂಕಿ ಅಂಶ ವಿಭಾಗ(ಎ.ಜಿ.ಎಸ್)<br>2.ಬೆಳೆ ವಿಮಾ ವಿಭಾಗ (ಸಿ.ಐ.ಎಸ್)<br>3.ಕೃಷಿ ಗಣತಿ, ಮಳೆ ಮತ್ತು ಗಣಕ ವಿಭಾಗ(ಎ.ಆರ್.ಸಿ)<br>4.ನಾಗರಿಕ ನೋಂದಣಿ, ರಾಷ್ಟ್ರೀಯ ಮಾದರಿ ಸಮೀಕ್ಷೆ ಮತ್ತು ಸ್ಥಳೀಯ ಸಂಸ್ಥೆಗಳ ಅಂಕಿ ಅಂಶಗಳು ವಿಭಾಗ (ಸಿ.ಎನ್. ಎಲ್) |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | 5.ರಾಜ್ಯಾದಾಯ, ಕೈಗಾರಿಕೆ ಮತ್ತು ಬೆಳೆಗಳ ವಿಭಾಗ (ಎಸ್.ಐ.ಪಿ)<br>6.ಪ್ರಕಟಣೆ,ತರಬೇತಿ ಮತ್ತು ಸಮನ್ವಯ ವಿಭಾಗ (ಪಿ.ಟಿ.ಸಿ).<br><br>ನಿರ್ದೇಶನಾಲಯದ ವಿಭಾಗಗಳ ಅಡಿಯಲ್ಲಿ ಕೈಗೊಂಡಿರುವ ಯೋಜನೆಗಳು ಈ ಕೆಳಕಂಡಂತೆ ಇದೆ:<br><br>ಸಿ.ಎನ್.ಎಲ್. ವಿಭಾಗದಿಂದ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:<br>• ರಾಷ್ಟ್ರೀಯ ಮಾದರಿ ಸಮೀಕ್ಷೆ(NSS)<br>• ನಾಗರೀಕ ನೋಂದಣಿ ಪದ್ಧತಿ(CRS)<br>• ವಸತಿ ಮತ್ತು ಕಟ್ಟಡ ನಿರ್ಮಾಣ ಅಂಕಿ ಅಂಶ(NBO)<br><br>ಕೃಷಿ ಗಣತಿ ವಿಭಾಗದಿಂದ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:É:<br>• ಕೃಷಿಗಣತಿ<br>• ಆರ್ಥಿಕ ಗಣತಿ<br>• ಆರ್ಥಿಕ ಸಮೀಕ್ಷೆ<br>• ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತಾದ ಮಾದರಿ ಸಮೀಕ್ಷೆ ಮತ್ತು ಇತರೆ ಸಮೀಕ್ಷೆ.<br><br>ಬೆಳೆ ವಿಮಾ ವಿಭಾಗದಿಂದ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:É:<br>ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯನ್ನು ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಯೋಜನೆಯಡಿ ಬೆಳೆ ಕಟಾವು ಪ್ರಯೋಗಗಳ ಅನುಷ್ಠಾನ, ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಈ ವಿಭಾಗದಿಂದ ಕೈಗೊಳ್ಳಲಾಗುತ್ತಿದೆ.<br>ಕೃಷಿ ಅಂಕಿ ಅಂಶ ವಿಭಾಗದಿಂದ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:<br>1. ಸಕಾಲಿಕ ವರದಿ ಯೋಜನೆ (ಕೇಂದ್ರ ಪುರಸ್ಕೃತ ಯೋಜನೆ-ಆಯವ್ಯಯ ಶಿರ್ಷಿಕೆ:3454-02-205-0-04 )<br>2. ಬೆಳೆ ಅಂಕಿ ಅಂಶಗಳ ಸುಧಾರಣಾ ಯೋಜನೆ (ಕೇಂದ್ರ ಪುರಸ್ಕೃತ ಯೋಜನೆ-ಆಯವ್ಯಯ ಶಿರ್ಷಿಕೆ: 3454-02-205-0-05)<br>3. ಹಣ್ಣು, ತರಕಾರಿ ಮತ್ತು ಉಪ ಬೆಳೆಗಳ ಅಂದಾಜು ಸಮೀಕ್ಷೆ (ರಾಜ್ಯ ವಲಯ ಯೋಜನೆ- ಆಯವ್ಯಯ ಶಿರ್ಷಿಕೆ: 3454-02-205-0-01). |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಆ) | ರಾಜ್ಯ ಸರ್ಕಾರ ಕೇಂದ್ರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಸಂಯೋಜನೆ ಮಂತ್ರಾಲಯದ ಅಡಿಯಲ್ಲಿ ಪ್ರತಿ ವರ್ಷ ಯಾವ-ಯಾವ ಸರ್ವೆಗಳನ್ನು ನಿಯತಕಾಲಿಕವಾಗಿ ಕೈಗೊಳ್ಳುತ್ತಿದೆ; ಮತ್ತು ಈ ಸರ್ವೆ ವರದಿಗಳನ್ನು ರಾಜ್ಯ ಅಥವಾ ಕೇಂದ್ರ ಮಟ್ಟದಲ್ಲಿ ಪ್ರಕಟಿಸಲಾಗುತ್ತಿದೆಯೇ; (ಪೂರ್ಣ ಮಾಹಿತಿ ನೀಡುವುದು) | (1)ರಾಜ್ಯ ಸರ್ಕಾರ ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಸಂಯೋಜನೆ ಮಂತ್ರಾಲಯದ ಅಡಿಯಲ್ಲಿ ಪ್ರತಿ ವರ್ಷ ನಿಯತಕಾಲಿಕವಾಗಿ ರಾಷ್ಟ್ರೀಯ ಮಾದರಿ ಸಮೀಕ್ಷೆಯನ್ನು ಕೈಗೊಳ್ಳುತ್ತಿದೆ.<br>ರಾಜ್ಯದಲ್ಲಿ ಇತ್ತೀಚಿನ 9 ಸುತ್ತುಗಳಲ್ಲಿ ನಡೆಸಿದ ಸಮೀಕ್ಷೆ ವರದಿಯನ್ನು ಪ್ರಕಟಿಸಿದ್ದು, ಸದರಿ ಮಾಹಿತಿಯನ್ನು **ಅನುಬಂಧ-1 ರಲ್ಲಿ** ಲಗತ್ತಿಸಲಾಗಿದೆ.<br>(2)2010-11ನೇ ಸಾಲಿನಿಂದ ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಸಂಯೋಜನೆ ಮಂತ್ರಾಲಯವು ಕೈಗಾರಿಕಾ ವಾರ್ಷಿಕ ಸಮೀಕ್ಷೆಯಡಿ ರಾಜ್ಯಕ್ಕೆ ನಿಗಧಿಗೊಳಿಸಿದ ಮಾದರಿಗಳಿಂದ (ಕೈಗಾರಿಕಾ ಘಟಕಗಳು) ಉತ್ಪಾದನಾ ಅಂಕಿ ಅಂಶಗಳನ್ನು ಸಂಗ್ರಹಿಸಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯದ ಮಾದರಿಗಳ ಮಾಹಿತಿಯನ್ನು ಒಗ್ಗೂಡಿಸಿ ವರದಿಯನ್ನು ತಯಾರಿಸಲಾಗುತ್ತದೆ<br>(3) ಕೇಂದ್ರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಸಂಯೋಜನೆ ಮಂತ್ರಾಲಯದ ಅಡಿಯಲ್ಲಿ ಪ್ರತಿ ವರ್ಷ ಯಾವುದೇ ಸರ್ವೆಗಳನ್ನು ಕೈಗೊಳ್ಳುತ್ತಿರುವುದಿಲ್ಲ. ಕೇಂದ್ರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಸಂಯೋಜನೆ ಮಂತ್ರಾಲಯದ ಮಾರ್ಗಸೂಚಿಯಂತೆ ರಾಜ್ಯ ಸರ್ಕಾರದಿಂದ 5/6 ವರ್ಷಕೊಮ್ಮೆ ಆರ್ಥಿಕ ಗಣತಿಯನ್ನು ಕೈಗೊಳ್ಳಲಾಗುತ್ತಿದೆ. |
| (ಇ) | ರಾಜ್ಯ ಸರ್ಕಾರ ಕೈಗೊಳ್ಳುವ ಈ ಸರ್ವೆಗಳಿಗೆ ಕೇಂದ್ರ ಸರ್ಕಾರದಿಂದ ದೊರೆಯುವ ಆರ್ಥಿಕ ಸವಲತ್ತು ಮತ್ತು ಇತರೆ ನೆರವುಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು) | (I) ರಾಜ್ಯ ಸರ್ಕಾರದಿಂದ ಕೈಗೊಳ್ಳುವ ಈ ಸಮೀಕ್ಷೆಗಳಿಗೆ ಕೇಂದ್ರ ಸರ್ಕಾರದಿಂದ ಯಾವುದೇ ಆರ್ಥಿಕ ಸವಲತ್ತು ಅಥವಾ ಇತರ ನೆರವು ದೊರೆಯುವುದಿಲ್ಲ.<br>ಕೇಂದ್ರ ಸರ್ಕಾರವು<br>1. Sampling design<br>2. Methodology<br>3. Technical Support<br>ವಿಷಯಗಳ ಬಗ್ಗೆ ಮಾರ್ಗದರ್ಶನ ನೀಡುತ್ತಿದ್ದು, ರಾಜ್ಯ ಸರ್ಕಾರವು ರಾಷ್ಟ್ರೀಯ ಮಾದರಿ ಸಮೀಕ್ಷೆಯನ್ನು ಕಾಲ ಕಾಲಕ್ಕೆ ಕೈಗೊಳ್ಳುತ್ತಿದೆ.<br>(II) ಕೈಗಾರಿಕಾ ವಾರ್ಷಿಕ ಸಮೀಕ್ಷೆಗೆ ಕೇಂದ್ರ ಸರ್ಕಾರವು ಯಾವುದೇ ಹಣಕಾಸು ನೆರವು ನೀಡಿರುವುದಿಲ್ಲ. ರಾಜ್ಯ ಮಟ್ಟದ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ. |

ಸಂಖ್ಯೆ: ಪಿಡಿಎಸ್ 30 ಐಪಿಆರ್ 2024

**(ಡಿ. ಸುಧಾಕರ್)**
**ಯೋಜನೆ, ಕಾರ್ಯಕ್ರಮ ಸಂಯೋಜನೆ**
**ಮತ್ತು ಸಾಂಖ್ಯಿಕ ಇಲಾಖಾ ಸಚಿವರು**

# ಅನುಬಂಧ-1

ರಾಜ್ಯ ಸರ್ಕಾರ ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಸಂಯೋಜನೆ ಮಂತ್ರಾಲಯದ ಅಡಿಯಲ್ಲಿ ಪ್ರತಿ ವರ್ಷ ನಿಯತಕಾಲಿಕವಾಗಿ ರಾಷ್ಟ್ರೀಯ ಮಾದರಿ ಸಮೀಕ್ಷೆಯನ್ನು ಕೈಗೊಳ್ಳುತ್ತಿದೆ. ಈ ಸರ್ವೆ ವರದಿಗಳನ್ನು ರಾಜ್ಯ ಮಟ್ಟದಲ್ಲಿ ಪ್ರಕಟಿಸಲಾಗುತ್ತಿರುವ ಮಾಹಿತಿ ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಲಾಗಿದೆ.

*****

| ಸುತ್ತು | ವಿಷಯ | ಮಾದರಿಗಳ ಸಂಖ್ಯೆ | ಸಮೀಕ್ಷಾ ಅವಧಿ | ಪ್ರಕಟಣೆಯ ವಿವರಗಳು |
|---|---|---|---|---|
| 71 | ಮನೆ ಪಟ್ಟಿ (Sch.0.0) ಗ್ರಾಮೀಣ ಮತ್ತು ಪಟ್ಟಣ<br>ಸಾಮಾಜಿಕ ಬಳಕೆ : ಆರೋಗ್ಯ (Sch.25.0)<br>ಸಾಮಾಜಿಕ ಬಳಕೆ : ಶಿಕ್ಷಣ (Sch.25.2) | 370 | 2014 ಜನವರಿ - 2014 ಜೂನ್ | ರಾಷ್ಟ್ರೀಯ ಮಾದರಿ ಸಮೀಕ್ಷೆ 74ನೆಯ ಸುತ್ತನ್ನು ಹೊರತುಪಡಿಸಿ, 71 ರಿಂದ 76 ರ ಸುತ್ತಿನವರೆಗೆ ಕೇಂದ್ರ ಹಾಗೂ ರಾಜ್ಯ ಮಾದರಿಗಳ ಮಾಹಿತಿಯನ್ನು ಕ್ರೂಢಿಕರಿಸಿ/ಒಗ್ಗೂಡಿಸಿ ಅಂತಿಮ ವರದಿಯನ್ನು ರಾಜ್ಯ ಮಟ್ಟದಲ್ಲಿ ಪ್ರಕಟಿಸಲಾಗಿರುತ್ತದೆ. |
| 72 | ಮನೆ ಪಟ್ಟಿ ಗ್ರಾಮೀಣ ಮತ್ತು ಪಟ್ಟಣ (Sch.0.0)<br>ದೇಶೀಯ ಪ್ರವಾಸೋದ್ಯಮ ಖರ್ಚು (Sch.21.1)<br>ಸೇವೆಗಳು ಮತ್ತು ಬಾಳಿಕೆ ಬರುವ ವಸ್ತುಗಳ ಮೇಲೆ ಗ್ರಾಹಕ ವೆಚ್ಚ (Sch 1.5)<br>ಕುಟುಂಬ ಗ್ರಾಹಕ ವೆಚ್ಚ (Sch.1.60)<br>ಆಹಾರ ಬಳಕೆ ವಿವರಗಳೊಂದಿಗೆ ಕುಟುಂಬ ಗ್ರಾಹಕ ವೆಚ್ಚ (Sch 1.61)<br>ಆಹಾರ ಬಳಕೆ ವಿವರಗಳೊಂದಿಗೆ ಕುಟುಂಬ ಗ್ರಾಹಕ ವೆಚ್ಚ (Sch 1.62) | 596 | ಜುಲೈ 2014 - ಜುನ್ 2015 | |
| 73 | ಮನೆ ಮತ್ತು ಕೃಷಿಯೇತರ ಉದ್ದಿಮೆಗಳ ಪಟ್ಟಿ (Sch 0.0)<br>ಅಸಂಘಟಿತ ಕೃಷಿ ಉದ್ದಿಮೆಗಳು (ನಿರ್ಮಾಣ ಸೇವೆಯನ್ನು ಹೊರತು ಪಡಿಸಿ) (Sch 2.34) | 664 | ಜುಲೈ 2015 - ಜುನ್ 2016 | |
| 74 | ಆರ್ಥಿಕ ಸಮೀಕ್ಷೆ ಫ್ರೇಮಿನಲ್ಲಿರುವ ಉದ್ದಿಮೆಗಳ ಪರಿಶೀಲನೆ ಸೇವಾ ವಲಯ ಸಮೀಕ್ಷೆ (1716 - ಬಿ.ಬಿ.ಎಂ.ಪಿ) | 2714 | ಜುಲೈ 2016 - ಸೆಪ್ಟೆಂಬರ್ 2016, ಅಕ್ಟೋಬರ್ 2016 - ಜೂನ್ 2017 | |
| 75 | ಮನೆ ಪಟ್ಟಿ (Sch.0.0) ಗ್ರಾಮೀಣ ಮತ್ತು ಪಟ್ಟಣ<br>ಕುಟುಂಬ ಗ್ರಾಹಕ ವೆಚ್ಚ (Sch.1.60)<br>ಸಾಮಾಜಿಕ ಬಳಕೆ : ಆರೋಗ್ಯ (Sch.25.0)<br>ಸಾಮಾಜಿಕ ಬಳಕೆ : ಶಿಕ್ಷಣ (Sch.25.2) | 596 | 2017 ಜುಲೈ - 2018 ಜೂನ್ | |
| 76 | ಮನೆ ಪಟ್ಟಿ (Sch.0.0) ಗ್ರಾಮೀಣ ಮತ್ತು ಪಟ್ಟಣ<br>ಕುಡಿಯುವ ನೀರು, ನೈರ್ಮಲ್ಯ, ಸ್ವಚ್ಛತೆ ಮತ್ತು ವಸತಿ ಸ್ಥಿ (Sch.1.2)<br>ಅಂಗವಿಕಲ ವ್ಯಕ್ತಿಗಳ ಸಮೀಕ್ಷೆ (Sch.26.0) | 410 | 2018 ಜುಲೈ - 2018 ಡಿಸೆಂಬರ್ | |

| ಸುತ್ತು | ವಿಷಯ | ಮಾದರಿಗಳ ಸಂಖ್ಯೆ | ಸಮೀಕ್ಷಾ ಅವಧಿ | ಪ್ರಕಟಣೆಯ ವಿವರಗಳು |
|---|---|---|---|---|
| 77 | ಮನೆ ಪಟ್ಟಿ (Sch.0.0) ಗ್ರಾಮೀಣ ಮತ್ತು ಪಟ್ಟಣ<br>ಭೂಮಿ ಮತ್ತು ಜಾನುವಾರು ಹಿಡುವಳಿಗಳು (Sch.33.1) (ಗ್ರಾಮೀಣ ಮಾತ್ರ)<br>ಸಾಲ ಮತ್ತು ಬಂಡವಾಳ (Sch.18.2) | 490 | 2019 ಜನವರಿ - 2019 ಡಿಸೆಂಬರ್ | ಕ್ಷೇತ್ರ ಕಾರ್ಯ ಹಾಗೂ Validation ಪ್ರಕ್ರಿಯೆಯು ಮುಕ್ತಾಯ ಗೊಂಡಿರುತ್ತದೆ. NSS ಕೇಂದ್ರ ಕಛೇರಿಯು Pooling Software ವನ್ನು ನೀಡಿದ ನಂತರ ಅಂತಿಮ ವರದಿಯನ್ನು ರಾಜ್ಯ ಮಟ್ಟದಲ್ಲಿ ಪ್ರಕಟಿಸಲಾಗುತ್ತದೆ. |
| 78 | ಮನೆ ಪಟ್ಟಿ (Sch.0.0) ಗ್ರಾಮೀಣ ಮತ್ತು ಪಟ್ಟಣ<br>ದೇಶೀಯ ಪ್ರವಾಸೋದ್ಯಮ ಖರ್ಚು (Sch.21.1) (ಕೋವಿಡ್-19 ಸಾಂಕ್ರಾಮಿಕ ರೋಗದ ಕಾರಣ ನಮೂನೆ ಕೈಬಿಡಲಾಗಿದೆ)<br>ಬಹು ಸೂಚಕ ಸಮೀಕ್ಷೆ (Sch.5.1) | 716 | 2020 ಜನವರಿ - 2020 ಡಿಸೆಂಬರ್ | |
| 79 | ಮನೆ ಪಟ್ಟಿ (Sch.0.0) ಗ್ರಾಮೀಣ ಮತ್ತು ಪಟ್ಟಣ<br>ಕ್ಯಾಮ್ಸ್ (CAMS) ನಮೂನೆ | 632 | 2022 ಜುಲೈ - 2023 ಜೂನ್ | ಕ್ಷೇತ್ರ ಕಾರ್ಯ ಪೂರ್ಣಗೊಂಡಿರುತ್ತದೆ. |